

# ಬಣ್ಣದ ಬೆಟ್ಟ



ಕಣ್ಣು ಹಾಯಿಸಿದೆಡೆಯೆಲ್ಲ ಬಣ್ಣ ಬಣ್ಣಗಳಿಂದ ಕಂಗೊಳಿಸುವ ಚಂದದ ಬೆಟ್ಟಗಳು. ಕೆಂಪು, ಹಳದಿ, ನೀಲಿ ಹಸಿರು ಮುಂತಾದ ಗಾಢ ಬಣ್ಣಗಳ ರಂಗೋಲಿ ಪುಡಿಯಿಂದ ಇಡೀ ಬೆಟ್ಟವನ್ನು ಅಲಂಕರಿಸಿದ್ದಾರೋ ಅಥವಾ ವಿಶ್ವ ವಿಖ್ಯಾತ ಕಲಾವಿದ ತನ್ನ ಕುಂಚದಿಂದ ಒಡಮೂಡಿಸಿದ ಅದ್ಭುತವಾದ ಕಲಾಕೃತಿಯೋ ಎಂದೆನಿಸುವ ಈ ವಿಶಿಷ್ಟ ಪರ್ವತಗಳು ಕಾಣಸಿಗುವುದು ಚೀನಾ ದೇಶದಲ್ಲಿ. ಇಲ್ಲಿನ ಆಗ್ನೇಯ ದಿಕ್ಕಿನಲ್ಲಿರುವ ಕಾಮನ ಬಿಲ್ಲಿನ ವರ್ಣದ ಈ ಪರ್ವತಗಳು ಝಂಗ್ಯೆ ಡ್ಯಾಂಕ್ಸಿಯಾ ಜಿಯಾಲಜಿಕಲ್ ಪಾರ್ಕ್‌ನ ಭಾಗವಾಗಿದೆ. ಸುಮಾರು 24 ದಶಲಕ್ಷ ವರ್ಷಗಳ ಹಿಂದೆ, ಬೇರೆ ಬೇರೆ ಬಣ್ಣಗಳ ಮರಳು ಕಲ್ಲು ಹಾಗೂ ಖನಿಜಗಳು ಒಂದರ ಮೇಲೊಂದು ಒತ್ತಿಕೊಂಡು ಬೇರೆ ಬೇರೆ ಪದರಗಳಾಗಿ ಮಾರ್ಪಟ್ಟಿವೆ. ಸಾವಿರಾರು ವರ್ಷಗಳ ಮಳೆ ಗಾಳಿಯ ಹೊಡೆತಕ್ಕೆ ಸಿಕ್ಕ ಈ ರಚನೆಗಳು ಕಣಿವೆಯ ಆಕಾರವಾಗಿ ರೂಪುಗೊಂಡಿರಬಹುದೆಂದು ಅಂದಾಜಿಸಲಾಗಿದೆ. ಈ ಜಾಗವನ್ನು 2010ರಲ್ಲಿ ಯುನೆಸ್ಕೋ ವಿಶ್ವ ಪರಂಪರೆ ಪಟ್ಟಿಯಲ್ಲಿ ಸೇರಿಸಿದ್ದು, ಸಾವಿರಾರು ಪ್ರವಾಸಿಗರ ಕಣ್ಮನ ಸೆಳೆಯುತ್ತಿದೆ.

■ ಪ್ರಿಯಾಂಕ ವಿ.ಎಚ್.